ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮೀನುಗಾರಿಕೆಯಲ್ಲಿ ಯಾಂತ್ರಿಕೃತ ಮತ್ತು ನಾಡದೋಣಿಯೆಂದು ಏಕೆ ಪ್ರತ್ಯೇಕ ಮಾಡುತ್ತೀರಿ? ಆದ್ದರಿಂದ ಮೀನುಗಾರಿಕೆಯಲ್ಲಿ ಉಪಯೋಗ ಮಾಡತಕ್ಕ ಎಲ್ಲಾ ಸಲಕರಣೆಗಳಿಗೂ ತೆರಿಗೆ ವಿನಾಯಿತಿಯನ್ನು ಕೊಡುವ ಬಗ್ಗೆ ಕ್ರಮ ತೆಗೆದುಕೊಳ್ಳಿ. ಎಲ್ಲಾ ಒಟ್ಟಿಗೆ ಬರುತ್ತದೆ. ರಾಷ್ಟ್ರೀಯ ಮಟ್ಟದಲ್ಲಿ ಅದನ್ನು ಸಪರೇಟ್ ಮಾಡಲಿಕ್ಕೆ ಏನಾದರೂ ಕ್ರಮ ಕೈಗೊಳ್ಳುತ್ತಿರಾ ಎಂದು ಕೇಳುತ್ತೇನೆ. ದಯವಿಟ್ಟು ಮೀನುಗಾರಿಕೆಗೆ ಉಪಯೋಗ ಮಾಡತಕ್ಕ ಎಲ್ಲಾ ಸಲಕರಣೆಗಳಿಗೆ ತೆರಿಗೆ ವಿನಾಯಿತಿ ಮಾಡಿ. ಮಧ್ಯದಲ್ಲಿ ಎಕೆ 4 ಪರ್‌ಸೆಂಟ್ ತೆರಿಗೆಯನ್ನು ಇಡುತ್ತೇನೆಂದು ಹೇಳುತ್ತೀರಿ? ದಯವಿಟ್ಟು ಇದಕ್ಕೆ ತಾವು ಸಹಕಾರ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ : ರಾಷ್ಟ್ರಮಟ್ಟದಲ್ಲಿ ಇದರ ಬಗ್ಗೆ ಚರ್ಚೆಯಾಗತಕ್ಕ ಕಾಲದಲ್ಲಿ ಇಡೀ ದೇಶಕ್ಕೆ ಅನ್ವಯವಾಗುವಂತೆ ಇದೊಂದು ತೀರ್ಮಾನಕ್ಕೆ ಬಂದಿದ್ದಾರೆ. ಮತ್ತೊಮ್ಮೆ ಇದನ್ನು ಪುನರ್‌ಪರಿಶೀಲನೆ ಮಾಡಿ ಎಂದು ಆ ಸಮಯದಲ್ಲಿ ಅಲ್ಲಿ ಕುಳಿತಾಗ ಚರ್ಚೆ ಮಾಡುತ್ತೇನೆ. ಎರಡನೆಯದಾಗಿ, ತಮಗೆ ಗೊತ್ತಿರುವಂತೆ ಈ ಸಮ್ಮಿಶ್ರ ಸರ್ಕಾರ ಬಂದ ಮೇಲೆ ಮೀನುಗಾರರಿಗೆ ಬಹಳಷ್ಟು ಅನುಕೂಲವನ್ನು ನಾವು ಮಾಡಿಕೊಟ್ಟಿದ್ದೇವೆ. ಬಹುಶಃ ಆ ಭಾಗದಲ್ಲಿ ಕಡಲು ಕೊರೆತವಾದಾಗ ನಾನು ಬಂದಾಗ ನಾಡದೋಣಿ ನಡೆಸುವವರಿಗೆ 200 ಲೀಟರ್ ಸೀಮೆ ಎಣ್ಣೆ ನೀಡುತ್ತಿದ್ದುದ್ದನ್ನು ಈಗ 400 ಲೀಟರ್‌ಗೆ ಏರಿಸಿದ್ದೇವೆ. ಯಾಂತ್ರಿಕೃತ ದೋಣಿಯವರಿಗೆ ಇದುವರೆಗೆ ಕರ ರಿಯಾಯಿತಿಯಲ್ಲಿ ನೀಡುತ್ತಿದ್ದ ಐವತ್ತೈದು ಸಾವಿರ ಕಿಲೋ ಲೀಟರ್ ಡೀಸೆಲ್ ಇದ್ದದ್ದನ್ನು ಈಗ 75 ಸಾವಿರ ಕಿಲೋಲೀಟರ್‌ಗೆ ಏರಿಸಿದ್ದೇವೆ. ಮೀನುಗಾರರಿಗೆ ನಾಲ್ಕು ಪರ್‌ಸೆಂಟ್ ಬಡ್ಡಿ ದರದಲ್ಲಿ ಹಣವನ್ನು ಕೊಡುತ್ತಿದ್ದೇವೆ. ನೀವು ಹೇಳಿದಂತೆ ಮೀನುಗಾರರಿಗೆ ಎಲ್ಲಾ ರೀತಿಯ ಅನುಕೂಲವನ್ನು ಮಾಡಿಕೊಡಲು ನಾವು ಸಿದ್ಧರಿದ್ದೇವೆ. ಈಗ ತಾವೇನು ಪ್ರಸ್ತಾಪ ಮಾಡಿದ್ದೀರಿ, ಇದರ ಬಗ್ಗೆ ಕೇಂದ್ರದಲ್ಲಿ ಚರ್ಚೆಯಾಗತಕ್ಕ ಕಾಲದಲ್ಲಿ ಇಡೀ ದೇಶಕ್ಕೆ ಅದನ್ನು ಅನ್ವಯ ಮಾಡಿ ಈ ರೀತಿಯ ವಿನಾಯಿತಿಯನ್ನು ಕೊಡಿ ಎಂದು ಒತ್ತಾಯ ತರುವಂಥ ಪ್ರಾಮಾಣಿಕ ಪ್ರಯತ್ನವನ್ನು ಮೀನುಗಾರರ ಪರವಾಗಿ ನಾನು ಮಾಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಾಡದೋಣಿಗಳು ಬಹಳ ಕಡಿಮೆ ಇದೆ. ಯಾತ್ರಿಕೃತ ದೋಣಿ ಜಾಸ್ತಿ ಇದೆ. ಆದ್ದರಿಂದ ದಯಮಾಡಿ ಇದನ್ನು ಮಾಡಿ.

ಹೊಸದಾಗಿ ಅಭಿವೃದ್ಧಿ ಪಡಿಸಿರುವ 'V' 1ನೇ ರೇಷ್ಮೆತಳಿ ಬಿತ್ತನೆ ಕಡ್ಡಿಯ ಕೊರತೆ ಬಗ್ಗೆ.

125 (642) Sri Dhruvanarayan R.(Santhemarall): Will the Minister for Planning, Statistics, Small Savings, Lotteries, Science and Technology and Secriculture be pleased to State :

A) Whether it has come to the notice of Government that there is shortage of seed cutting of newly developed VI mulberry variety;

B) Whether Government has taken decision to increase the amount being paid to the Scheduled Caste/Scheduled tribe and others for construction of rearing houses as per present S.R.;

C) If so, what is the action taken by Government?

Sri Sriramachandra Gowda (Minister for Planning, Statistics, Small Savings, Lotteries, Science and Technology and Sericulture) :

A) Presently 484 laksh of V-1 variety mulberry Saplings are raised in Kissan Nureries of the State. Mulberry is being cultivated in 88143 hectares of which V-1 variety is in 24447 hectares. The cuttings of the plaints would also be available for planting, and, therefore, there will not be any shortae of cuttings.

B) Yes.

C) NABARD is persuaded to revise the Unit Cost.

ಶ್ರೀ ಆರ್. ಧ್ರುವನಾರಾಯಣ್ : ಮಾನ್ಯ ಅಧ್ಯಕ್ಷರೆ, ನಾನು ಎರಡು ಪ್ರಶ್ನೆಗಳನ್ನು ಕೇಳಿದ್ದೇನೆ. ಒಂದು, ಹೊಸದಾಗಿ ಅಭಿವೃದ್ಧಿ ಪಡಿಸಿರುವಂಥ V-1 ರೇಷ್ಮೆ ಬಿತ್ತನೆ ಕಡ್ಡಿಯ ಕೊರತೆ ಬಹಳಷ್ಟು ಭಾಗಗಳಲ್ಲಿ ಇದೆ. ಏಕೆಂದರೆ ಇತ್ತೀಚಿನ ದಿವಸಗಳಲ್ಲಿ ರೇಷ್ಮೆ ಬೆಳೆ ಬಹಳ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ಕೇಂದ್ರ ರೇಷ್ಮೆ ಮಂಡಳಿಯವರು V-1 ಎಂಬ ತಳಿಯನ್ನು ಅಭಿವೃದ್ಧಿಪಡಿಸಿ ಉತ್ತಮವಾದ ತಳಿಯನ್ನು ಕೊಟ್ಟಿದ್ದಾರೆ. ರಾಜ್ಯವ್ಯಾಪ್ತಿ ಇದಕ್ಕೆ ತುಂಬಾ ಬೇಡಿಕೆ ಇದೆ. ಅವರು ನನ್ನ ಪ್ರಶ್ನೆಗೆ ಇದು ಸಾಕಷ್ಟು ಲಭ್ಯವಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಲಭ್ಯವಿದ್ದರೆ ನಾನು ಪ್ರಶ್ನೆ ಕೇಳತಕ್ಕ ಅವಶ್ಯಕತೆಯೇ ಇರುತ್ತಿರಲಿಲ್ಲ. ಬಹಳಷ್ಟು ಕಡೆ ಆ V-1 ರೇಷ್ಮೆ ಬಿತ್ತನೆ ಕಡ್ಡಿಯ ಬೇಡಿಕೆ ಇದೆ. ದಯಮಾಡಿ ಅದು ಎಲ್ಲಾ ಕಡೆ ಸರಬರಾಜು ಆಗತಕ್ಕ ವ್ಯವಸ್ಥೆಯಾಗಬೇಕು. ನನ್ನ ಎರಡನೆಯ ಪ್ರಶ್ನೆ, ರೇಷ್ಮೆ ಹುಳು ಸಾಕಾಣಿಕೆ ಮನೆ. ಅದಕ್ಕೆ ಮೂರು ರೀತಿಯಲ್ಲಿ 15 ರಿಂದ 25 ಅಡಿ ಮನೆಗೆ 15 ಸಾವಿರ, 20 ರಿಂದ 30 ಅಡಿಯವರೆಗಿನ ಮನೆಗೆ 25 ಸಾವಿರ, 20 ರಿಂದ 50 ಅಡಿಯ ಮನೆಗೆ 50 ಸಾವಿರ ಸರ್ಕಾರ ಕೊಡುತ್ತಿತ್ತು. ಆದರೆ ಇತ್ತೀಚೆಗೆ ಸಿಮೆಂಟ್ ಮತ್ತು ಇನ್ನಿತರ ಸಾಮಗ್ರಿಗಳ ದರ ಏರಿಕೆಯಿಂದ ಆ ರೇಷ್ಮೆ ಹುಳು ಸಾಕಾಣಿಕೆಯ ಮನೆಗೆ ಹೆಚ್ಚಿನ ಹಣವನ್ನು ಸರ್ಕಾರ ಒದಗಿಸಿಕೊಡಬೇಕು. ಇಲ್ಲದಿದ್ದರೆ ಆ ಹುಳು ಸಾಕಾಣಿಕೆ ಮನೆಯನ್ನು ಕಟ್ಟುವುದಕ್ಕಾಗುವುದಿಲ್ಲ ಜೊತೆಗೆ ಈ V-1 ಕಡ್ಡಿ ಬಹಳ ಒಳ್ಳೆಯ ತಳಿ. ಉತ್ತಮ ಇಳುವರಿ ಕೊಡತಕ್ಕ, ಸೊಪ್ಪನ್ನು ಕೊಡತಕ್ಕದ್ದು. ಇದನ್ನು ಅಭಿವೃದ್ಧಿಪಡಿಸತಕ್ಕದ್ದು ರಾಜ್ಯ ಸರ್ಕಾರದ ಕರ್ತವ್ಯ. ಇದಕ್ಕೆ ರಾಜ್ಯವ್ಯಾಪ್ತಿ ತುಂಬಾ ಬೇಡಿಕೆ ಇದೆ.

ಆದರೆ ಉತ್ತರದಲ್ಲಿ ಇದನ್ನು ಸಾಕಷ್ಟು ಒದಗಿಸಿದ್ದೇವೆಂದು ಹೇಳಿದ್ದೀರಿ. ನಮ್ಮ ಚಾಮರಾಜನಗರ, ಮೈಸೂರು ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಕೂಡ ಅಪಾರವಾದ ಬೇಡಿಕೆ ಇದೆ. ಕರ್ನಾಟಕ ರೇಷ್ಮೆ ಬೆಳೆಯಲ್ಲಿ ಹೆಸರುವಾಸಿಯಾಗಿದೆ. ಇಡೀ ರಾಷ್ಟ್ರದಲ್ಲಿ ನಮ್ಮದೇ ಮೊದಲನೆಯದ್ದು. ಇತ್ತೀಚಿನ ವರ್ಷಗಳ ಡೇಟಾವನ್ನು ತೆಗೆದುಕೊಂಡರೆ ಇದು ಕ್ಷೀಣಿಸುತ್ತಿದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಇದನ್ನು ಅಭಿವೃದ್ಧಿ ಪಡಿಸತಕ್ಕ ಜವಾಬ್ದಾರಿ ನಮ್ಮ ಮೇಲಿರುವ ಈ ಸಂದರ್ಭದಲ್ಲಿ ಈ V-1 ತಳಿ ರಾಜ್ಯವ್ಯಾಪಿ ಬೇಡಿಕೆ ಇರುವುದರಿಂದ ಅದನ್ನು ಒದಗಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಚಂದ್ರಗೌಡ : ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸುಮಾರು ಎರಡು ನೂರು ಲಕ್ಷ ನರ್ಸರಿಗಳು ಆದರೆ ಸಾಕು ಎನ್ನುವಂಥ ಐಡಿಯಾ ಇತ್ತು. ಆದರೆ ನಮ್ಮ ರಾಜ್ಯದಲ್ಲಿ 484 ಲಕ್ಷದಷ್ಟು ಆ ತಳಿಯನ್ನು ಈಗಾಗಲೇ ಮಾಡಲಾಗಿದೆ. ಚಾಮರಾಜ ನಗರದಲ್ಲಿ 1.25 ಲಕ್ಷದಷ್ಟು ತಯಾರಿಯಾಗಿದೆ. ಚಾಮರಾಜನಗರದಲ್ಲಿ ಸ್ವಲ್ಪ ಕಪ್ಪು ನೆಲ ಇರತಕ್ಕ ಜಾಗಗಳಲ್ಲಿ ಎಲ್ಲರೂ ಕೂಡ ಇದನ್ನು ಉಪಯೋಗಿಸುತ್ತಿಲ್ಲ. ಅಲ್ಲಿ ಬೇರೆ ಬೇರೆ ತಳಿಯನ್ನೂ ಕೂಡ ಉಪಯೋಗಿಸುತ್ತಿದ್ದಾರೆ. ಹೀಗಾಗಿ ಅಲ್ಲಿಗೆ ಎಷ್ಟು ಬೇಕೋ ಅದಕ್ಕಿಂತ ಎರಡರಷ್ಟು ಈಗಾಗಲೇ ಉತ್ಪತ್ತಿಯಾಗಿದೆ. ಸಲಕರಣೆ ಆಗುತ್ತಿದೆ. ತಮಗೆ ಎಲ್ಲಾದರೂ ಕೊರತೆ ಇದೆಯೆಂಬ ಬಗ್ಗೆ ಏನಾದರೂ ನನಗೆ ಮಾಹಿತಿ ಕೊಡುವುದಾದರೆ, ಆ ಕೊರತೆಯನ್ನು ತಕ್ಷಣವೇ ನೀಗಿಸತಕ್ಕ ವ್ಯವಸ್ಥೆಯನ್ನು ಮಾಡಲು ನಾನು ತಯಾರಿದ್ದೇನೆ. ಮತ್ತೊಂದು ಪ್ರಶ್ನೆಯನ್ನೇನು ತಾವು ಕೇಳಿದ್ದೀರಿ, ಅದಕ್ಕೆ ಸಂಬಂಧ ಪಟ್ಟಂತೆ ನಬಾರ್ಡ್‌ನವರ ಜೊತೆ ನಾವು ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಎಸ್.ಆರ್. ರೇಟ್‌ಟನ್ನು ನಾವು ಪಿ.ಡಬ್ಲ್ಯೂ.ಡಿ. ಯಿಂದ ವೆರಿಫೈ ಮಾಡುವುದಿಲ್ಲ. ರೇಷ್ಮೆ ಇಲಾಖೆಯಲ್ಲಿ ಬರತಕ್ಕ ಸಂದರ್ಭದಲ್ಲಿ ನಬಾರ್ಡ್‌ನವರು ಸುಮಾರು ಆರು ತಿಂಗಳಿಗೆ ಒಂದು ಸಲ ಇದನ್ನು ರಿವೈಸ್ ಮಾಡುತ್ತಿರುತ್ತಾರೆ. ಆ ರೀತಿ ರಿವೈಸ್ ಮಾಡುವಂಥ ಸಂದರ್ಭದಲ್ಲಿ ಬೆಲೆ ಜಾಸ್ತಿಯಾದಾಗ ಆ ವ್ಯವಸ್ಥೆಯಲ್ಲಿ ಎಷ್ಟು ಬೇಕು ಎಂಬ ಬಗ್ಗೆ ನಾವು ಈಗಾಗಲೇ ನಬಾರ್ಡ್‌ನವರ ಜೊತೆ ವ್ಯವಹಾರ ಮಾಡಿದ್ದೇವೆ. ಈವತ್ತು ಏನು ಬೆಲೆ ಜಾಸ್ತಿಯಾಗಿದೆ, ಅದಕ್ಕೆ ಸರಿದೂಗಿಸುವಂಥ ವ್ಯವಸ್ಥೆಯನ್ನು ಮಾಡಿ ಆ ಹಣವನ್ನೂ ಕೂಡ ಜಾಸ್ತಿ ಮಾಡಬೇಕು ಎಂಬ ತೀರ್ಮಾನಕ್ಕೆ ಈಗಾಗಲೇ ಚರ್ಚೆಯನ್ನು ಮಾಡಿದ್ದೇವೆ. ಆದಷ್ಟು ಬೇಗ ಅದನ್ನು ಮಾಡುತ್ತೇವೆ.

ಚು.ಪ್ರ. 136(647)

(ತಡೆಹಿಡಿಯಲಾಗಿದೆ)

ಅಧ್ಯಕ್ಷರು : ಮಾನ್ಯ ಗುರುಪಾದಪ್ಪನವರೆ, ತಮ್ಮ ಪ್ರಶ್ನೆಗೆ ಉತ್ತರ... ಇದು ಆರ್ಥಿಕ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ ಅವರು...